**5** ನೇ ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಮೈಸೂರು.
ಮೊಕದ್ದಮೆ ಸಂಖ್ಯೆ: ಸಿ.ಸಿ.ನಂ.**2010/2021**

ಸಿ.ಡಬ್ಲ್ಯು-**1**/ಪಿ.ಡಬ್ಲ್ಯು-**1**

| | |
|---|---|
| ಸಾಕ್ಷಿಯ ಹೆಸರು | ಹೇಮಲತಾ |
| ತಂದೆಯ ಹೆಸರು | ಯೊಗೇಗೌಡ |
| ವಯಸ್ಸು | 27 ವರ್ಷ |
| ಉದ್ಯೋಗ | Software engineer |
| ವಾಸ | ಬೆಂಗಳೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ದಿನಾಂಕ: **08.06.2026**

ಮುಖ್ಯ ವಿಚಾರಣೆ: ಮಾನ್ಯ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾಸಾ-2 ನನ್ನ ತಂದೆ. ಚಾಸಾ-3 ರವರ ಪರಿಚಯವಿದೆ. ಚಾಸಾ-3 ರವರು ಜನವಾದಿ ಮಹಿಳಾ ಸಂಘದಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಾಸಾ-4 ನನಗೆ ಗೊತ್ತಿಲ್ಲ. ಚಾಸಾ-5 ರವರ ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ.

ನಾನು ಮತ್ತು 1 ನೇ ಆರೋಪಿ ಪರಸ್ಪರ ಪ್ರೀತಿಸುತ್ತಿದ್ದ, ದಿ: 15.11.2019 ರಲ್ಲಿ ನನ್ನ ಹಾಗೂ ಆತನ ನಿಶ್ಚಿತಾರ್ತ ಆಗಿರುತ್ತದೆ. 1 ಆರೋಪಿ ಮಲೇಶಿಯಾದಲ್ಲಿದ್ದು, ಆದರೆ ನನ್ನ ಬಳಿ ಲಂಡನ್ ನಲ್ಲಿ ವಾಸವಿದ್ದೇನೆ ಎಂದು ಸುಳ್ಳು ಹೇಳಿರುತ್ತಾರೆ. ಈ ವಿಚಾರ ನನಗೆ ತಿಳಿದ ನಂತರ ಆತನ ವರ್ತನೆ ಬದಿಲಾಗಿರುತ್ತದೆ. ದಿ: 24.04.2020 ರಲ್ಲಿ ನನ್ನ ಹಾಗೂ 1 ನೇ ಆರೋಪಿಯ ಮದುವೆ ನಿಶ್ಚಯವಾಗಿರುತ್ತದೆ. ಕೋರೋನ ಕಾರಣದಿಂದ ಮದುವೆ ನಡೆಯದೇ ಮುಂದುಡಲ್ಪಟ್ಟಿರುತ್ತದೆ.

1 ನೇ ಆರೋಪಿ ನನಗೆ ದೂರವಾಣಿ ಕರೆ ಮಾಡಿ ಕೊರೋನ ಇದ್ದರೂ ಸಹ ಮದುವೆ ಯಾಗಬೇಕೆಂದು ಹಿಂಸೆ ನೀಡುತ್ತಿದ್ದ. ನಂತರ ಹೊರ ದೇಶದಿಂದ ಕೆಲಸವನ್ನು ಬಿಟ್ಟು ಭಾರತಕ್ಕೆ ಬಂದಿರುತ್ತಾರೆ. ನನಗೆ ಕ್ಯಾಂಪಸ್ ಸೆಲೆಕ್ಷನ್ ಆಗಿರುತ್ತದೆ. ನೀನು ಕೆಲಸಕ್ಕೆ ಹೋಗಬಾರದು ಊರಿನಲ್ಲಿ

ನನ್ನೊಂದಿಗೆ ಇರಬೇಕೆಂದು ನನಗೆ ಹಿಂಸೆ ಕೊಟ್ಟು ಬಲವಂತಪಡಿಸುತ್ತಿದ್ದರು. ಅದಕ್ಕೆ ನಾನು ಒಪ್ಪದೇ ಇರುವ ಕಾರಣ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಆದ್ದರಿಂದ ಮದುವೆ ಬೇಡವೆಂದು ನನ್ನ ತಂದೆ-ತಾಯಿಗೆ ಹೇಳಿರುತ್ತೇನೆ.

ನಂತರದಲ್ಲಿ 1 ನೇ ಆರೋಪಿ ಮದುವೆ ನಿಂತರೆ ನಮ್ಮ ಕುಟುಂಬದ ಮರೆಯಾದೇ ಹೋಗುತ್ತೇ ಎಂದು ಹೇಳಿ ನಿಶ್ಚಿತಾರ್ತ ಆದ ನಂತರದಲ್ಲಿ ತೆಗೆದ ನಮ್ಮ ವೈಯಕ್ತಿಕ ಭಾವಚಿತ್ರವನ್ನು ನನ್ನ ತಂದೆಯವರ ಫೋನಿಗೆ ಕಳುಹಿಸಿರತ್ತಾರೆ. ಇದನ್ನು ತಿಳಿದ ನನ್ನ ತಂದೆ ಈ ಮದುವೆ ಮುಂದುವರಿಸಬಾರದೆಂದು ದಿಃ21.12.2020 ರಂದು ಕಾನೂನು ಬದ್ಧ ಒಪ್ಪಂದದ ಪ್ರಕಾರವಾಗಿ ಒಂದು ಕರಾರನ್ನು ಮಾಡಿಕೊಂಡಿರುತ್ತಾರೆ. ಸದರಿ ಕರಾರು ಪತ್ರದಲ್ಲಿ ಇಬ್ಬರು ಪಕ್ಷಗಾರರು ಫೋಟೊಗಳನ್ನು ಶೇರ್ ಮಾಡಬಾರದು ದುರ್ಬಳಕೆ ಮಾಡಿಕೊಳ್ಳಬಾರದು, ಇಬ್ಬರೂ ಒಪ್ಪಿಕೊಂಡು ಕರಾರು ಪತ್ರ ಬರೆಸಲಾಗಿರುತ್ತದೆ.

ತದನಂತರ, ದಿಃ 01.01.2021 ರಂದು ನನ್ನ ವಾಟ್ಸ್ ನಂ.8310668136 ನಲ್ಲಿ 1 ನೇ ಆರೋಪಿ ನನಗೆ ವಾಟ್ಸ್ ಆ್ಯಪ್ ನಲ್ಲಿ ಬೆದರಿಕೆ ಮೆಸೇಜ್ ನ್ನು ಕಳುಹಿಸಿದ್ದು, ಸದರಿ ಮೇಸೆಜ್ ನಲ್ಲಿ ನಾನು ಸತ್ತು ಹೋದರೆ ಅದಕ್ಕೆ ಕಾರಣ ನೀನು ಮತ್ತು ನಿನ್ನ ತಂದೆ ಎಂದು ಕಳುಹಿಸಿರುತ್ತಾನೆ. ಆದ್ದರಿಂದ ನನ್ನ ತಂದೆ ಹೆಬ್ಬಾಳ ಪೋಲಿಸ್ ಠಾಣೆಗೆ ಹೋಗಿ ಅದೇ ದಿನ ದೂರನ್ನು ನೀಡಿರುತ್ತಾರೆ. ನಂತರ ಪೋಲಿಸರು 1 ನೇ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ನನಗೆ 2 ತಿಂಗಳ ಕಾಲ ಯಾವುದೇ ಮೇಸೇಜ್ ಬಂದಿರುವುದಿಲ್ಲ.

ದಿಃ 27.03.2021 ರಂದು ಪುನಃ ವಾಟ್ಸ ಆ್ಯಪ್ ನಲ್ಲಿ ಅನೌನ್ ನಂಬರಿನಿಂದ ಮೇಸೇಜ್ ಬಂದಿರುತ್ತದೆ. ಅದೇ ದಿನ ನನ್ನ ಹೇಸರಿನಲ್ಲಿ ನಕಲಿ ಪೇಸ್ ಬುಕ್ ಅಕೌಂಟ್ ಕ್ರಿಯೇಟ್ ಆಗಿರುತ್ತದೆ.

ಮಾರನೇ ದಿನ ನನ್ನ ಮತ್ತು 1 ನೇ ಆರೋಪಿ ಇರುವ ಭಾವಚಿತ್ರ ನಕಲಿ ಪೇಸ್ ಬುಕ್ ನಲ್ಲಿ ಅಪ್ಲೋಡ್ ಆಗಿರುತ್ತದೆ. ಅದೇ ನಕಲಿ ಅಕೌಂಟಿನಿಂದ ನನ್ನ ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ಪಾಲೋ ರಿಕ್ವೇಸ್ಟ್ ಕಳುಹಿಸಿರುತ್ತಾರೆ. ಇದನ್ನು ನೋಡಿದ ನನ್ನ ಸಂಬಂಧಿಕರು ಮತ್ತು ಸ್ನೇಹಿತರು ನನಗೆ ಮತ್ತು ನನ್ನ ತಂದೆಗೆ ಪಶ್ನಿಸಲು ಪ್ರಾಂಭಿಸುತ್ತಾರೆ. ಇದರಿಂದ ನನಗೆ ಮತ್ತು ನನ್ನ ತಂದೆ-ತಾಯಿಗೆ ಮಾನಸಿಕವಾಗಿ ನೋವುಂಟಾಗಿರುತ್ತದೆ.

ಈ ಸಂಬಂಧವಾಗಿ ದಿಃ 29.03.2021 ರಂದು ಚಾಸಾ-3 ರವರನ್ನು ಬೇಟಿ ಮಾಡಿ ನಡೆದ ವಿಚಾರ ತಿಳಿಸಿದ್ದು, ಸದರಿಯವರು ಮೇಲೆ ಹೇಳಿದ ವಿಚಾರಗಳನ್ನು 1 ನೇ ಆರೋಪಿಗೆ ದೂರವಾಣಿ ಕರೆ ಮಾಡಿದಾಗ 2 ನೇ ಆರೋಪಿ ದೂರವಾಣಿ ಕರೆಯನ್ನು ತೆಗೆದುಕೊಂಡು ಆರು ವರ್ಷದಿಂದ ಅವರ ತಂದೆ ಸೂಳೆಗೆ ಬಿಟ್ಟಿದ್ದಾರೆಂದು ಬೈದು ದೂರವಾಣಿ ಕರೆಯನ್ನು ಕಟ್ ಮಾಡಿರುತ್ತಾರೆ.

ತದನಂತರದಲ್ಲಿ 1 ನೇ ಆರೋಪಿ ನನ್ನ ತಂದೆಗೆ ದೂರವಾಣಿ ಕರೆ ಮಾಡಿ ನಾನು ಪೇಸ್‌ಬುಕ್ ನಲ್ಲಿ ಪೋಟೊಗಳನ್ನು ಅಪ್ಲೋಡ್ ಮಾಡಿಲ್ಲ ಎಂದು ತಿಳಿಸಿರುತ್ತಾರೆ. ಚಾಸಾ-3 ರವರು ನಿನ್ನ ವಿರುದ್ಧ ದೂರು ನೀಡುತ್ತೇನೆ ಎಂದು ಹೇಳಲು ಹೋದಾಗ ಆರೋಪಿ ನಾನು ಮತ್ತು ಹೇಮಲತಾ ಬೆಡ್ ಮೇಲೆ ಇರುವ ಪೋಟೋ ವನ್ನು ಅಪ್ಲೋಡ್ ಮಾಡುತ್ತೇನೆ ಎಂದು ಬೆದರಿಸಿರುತ್ತಾನೆ. ನಂತರ 1 ನೇ ಆರೋಪಿ ನಕಲಿ ಪೇಸ್ ಬುಕ್ ನಲ್ಲಿರುವ ಪೋಟೊ ಮತ್ತು ಅಕ್ಂಟ್ ನ್ನು ಡಿಲೀಟ್ ಮಾಡಿರುತ್ತಾನೆ. ಈ ಬಗ್ಗೆ ಹೆಬ್ಬಾಳ ಪೋಲಿಸ್ ಠಾಣೆಯಲ್ಲಿ ದಿಃ 30.03.2021 ರಂದು ದೂರನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿ.ಪಿ-1 ಎಂದು, ಸಾಕ್ಷಿ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು.

ದಿಃ 31.03.2021 ರಂದು ನಮ್ಮ ಮನೆಗೆ ಪೋಲಿಸರು ಬಂದು ನಾನು ತೋರಿಸಿದಂತೆ

ಮಹಜರ್ ಕ್ರಮವನ್ನು ಸಂಜೆ 5.00 ಗಂಟೆಯಿಂದ 5.30 ಗಂಟೆಯವರೆಗೆ ಜರುಗಿಸಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-4 ಮತ್ತು 5 ರವರು ಹಾಜರಿದ್ದರು. ಸದರಿ ಮಹಜರ್ ನ್ನು ನಿ.ಪಿ-2 ಎಂದು, ಸಾಕ್ಷಿ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಪರಸ್ಪರ ಒಪ್ಪಂದದ ಕರಾರು ಪತ್ರ ನನ್ನ ಬಳಿಯೇ ಇರುತ್ತದೆ. ಈ ದಿನ ದೃಢಿಕೃತ ನಕಲನ್ನು ಹಾಜರುಪಡಿಸುತ್ತಿದ್ದು, ಸದರಿ ದಾಖಲೆಯನ್ನು ಗುರುತಿಸಲು ಆರೋಪಿ ಪರ ವಕೀಲರು ತರಕಾರನ್ನು ವ್ಯಕ್ತಪಡಿಸಿರುತ್ತಾರೆ. ಸದರಿ ತಕರಾರಿನ ಮೇರೆಗೆ ಸದರಿ ದಾಖಲೆಯನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ನ್ಯಾಯಾಧೀಶರ ಮುಂದೆ ಈ ಬಗ್ಗೆ ನಾನು ದಿಃ 31.03.2021 ರಂದು ಹೇಳಿಕೆ ನೀಡಿರುತ್ತೇನೆ. ಅದನ್ನು ನಿ.ಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ-4(ಎ), 4(ಬಿ) ಮತ್ತು 4(ಸಿ) ಎಂದು ಗುರುತಿಸಲಾಯಿತು.

ದಿನಾಂಕಃ 06.04.2021 ರಂದು ನನ್ನ ಮೊಬೈಲ್ ಪೋನಾದ ಸ್ಯಾಮ್ ಸಂಗ್ ಜೆ-7 ನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-9 ಮತ್ತು ಚಾಸಾ-10 ರವರು ಹಾಜರಿದ್ದರು. ಸಾಕ್ಷಿ ಮಹಜರ್ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-5(ಎ) ಎಂದು ಗುರುಸಲಾಯಿತು. ಅದೇ ದಿನ ಪ್ರಕರಣಕ್ಕೆ ಸಂಬಂದಿಸಿದಂತೆ ಕಾಲ್ ರೆಕಾರ್ಡ್ ಮಾಡಿದ್ದ 8 ಜಿಬಿಯ ಪೆನ್ ಡ್ರೈವ್ ನ್ನು ನೀಡಿದ್ದು, ಅದನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ, ಅದನ್ನು ಈಗ ನೋಡುತ್ತಿದ್ದು, ಮು.ಮಾ-1 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ 65 ಬಿ ಪ್ರಮಾಣ ಪತ್ರವನ್ನು ನಿ.ಪಿ-6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ನಾನು ಉಪಯೋಗಿಸುತ್ತಿದ್ದ ಮೊಬೈಲ್‌ನ್ನು ಪೋಲಿಸ್ ರು ವಶಪಡಿಸಿಕೊಂಡಿದ್ದು, ಈ ದಿನ ತೆರೆದ ನ್ಯಾಯಾಲಯದಲ್ಲಿ ನೋಡಲಾಗಿ ಅದನ್ನು

ಮು.ಮಾ-2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರವನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿರುವುದರಿಂದ ಮುಂದೂಡಲಾಯಿತು).

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.).
ಓ.ಹೇ.ಕೇ. ಸರಿ ಇದೆ.

**5** ನೇ ಪ್ರ.ದ.ನ್ಯಾ.ದಂ,ಮೈಸೂರು